ಸಿಸಿ ನಂ.- **1047/2023**

ಪಿ. ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- 21-01-2025 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ- ದೂರುದಾರರ ಪರ ವಕೀಲರಿಂದ -

ನಾನು ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿ ಬರೆಯಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಗೊತ್ತು ಮತ್ತು ಅದರಲ್ಲಿರುವ ಸಹಿಗಳು ನನ್ನದಾಗಿವೆ.

ಸಾಕ್ಷಿಯು ಆರೋಪಿ ನೀಡಿರುವ ಚೆಕ್ ನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.- 1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.- 1-ಎ ಎಂದು, ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 2 ಎಂದು, ಆರೋಪಿಗೆ ನೀಡಿರುವ ಲೀಗಲ್ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 3 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 4 ಎಂದು, ಮುಚ್ಚಿದ ಅಂಚೆ ಲಕೋಟೆಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಿ ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿರುವ ನೋಟಿಸಿನ ಪತ್ರಿಗಳನ್ನು ನಿಪಿ 5 ಎ ಮತ್ತು 6 ಎ ಎಂದು, ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ಇರುವ ನನ್ನ ಖಾತೆಯ 7 ಪುಟಗಳ ವಿವರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 7 ಎಂದು, ಬ್ಯಾಂಕ್ ಆಫ್ ಬರೋಡಾ ನಲ್ಲಿ ಇರುವ ನನ್ನ ಖಾತೆಯ ವಿವರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 8 ಮತ್ತು 9 ಎಂದು, ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ಇರುವ ನನ್ನ ಖಾತೆಯ 5 ಪುಟಗಳ ವಿವರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 10 ಎಂದು, ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ಇರುವ ನನ್ನ ಖಾತೆಯ ವಿವರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.- 11 ಮತ್ತು 12 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ದೂರುದಾರರ ಪರ ವಕೀಲರು ಇನ್ನೂ ಕೆಲವು ದಾಖಲಾತಿಗಳ ಗುರುತಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.